

ಮಹಿಳೆ: ನನಗೆ ಡೈವೋರ್ಸ್ ನೀಡಿದ ಪತಿಯೊಂದಿಗೆ ಪುನಃ ಮದುವೆ ಮಾಡಿಕೊಳ್ಳಬೇಕಾಗಿದೆ.

ನ್ಯಾಯಾಧೀಶ: ಕೇವಲ ಒಂದು ವಾರದ ಹಿಂದಷ್ಟೇ ನಿಮ್ಮ ಡೈವೋರ್ಸ್ ಆಗಿದೆ. ಆಗಲೇ ಮನಸ್ಸು ಬದಲಾಯಿತೆ?

ಮಹಿಳೆ: ಹಾಗೇನಿಲ್ಲ ಡೈವೋರ್ಸ್ ನಂತರ ಆತ ತುಂಬಾ ಖುಷಿಯಲ್ಲಿದ್ದಂತೆ ಕಂಡುಬರುತ್ತಿದೆ. ಅದನ್ನು ಕಂಡು ನನಗೆ ಸಹಿಸೋಕೆ ಆಗುತ್ತಿಲ್ಲ.

★★★

ಪೊಲೀಸ್ ತರಬೇತಿ ಕೇಂದ್ರದಲ್ಲಿ ಹೊಸದಾಗಿ ಪೊಲೀಸ್ ಸೇವೆಗೆ ಸೇರಿದ ಯುವಕರಿಗೆ ತರಬೇತಿ ನೀಡಲಾಗುತ್ತಿತ್ತು.

ತರಬೇತಿ ನೀಡುತ್ತಿದ್ದ ಪೊಲೀಸ್ ಅಧಿಕಾರಿ ತನ್ನ ಒಂದು ಕೈಯಲ್ಲಿ ಬಂದೂಕನ್ನು ಎತ್ತಿಹಿಡಿದು 'ಇದು ಏನು?' ಎಂದು ಕಿರಣ ಎಂಬ ಯುವಕನನ್ನು ಕೇಳಿದ.

ಅದಕ್ಕೆ ಅವನು 'ಅದು ಬಂದೂಕು ಸಾರ್' ಎಂದ.

ಆಗ ಪೊಲೀಸ್ ಅಧಿಕಾರಿ 'ಇದು ಬರೀ ಬಂದೂಕಷ್ಟೇ ಅಲ್ಲ. ಇದು ನಿನ್ನ ಗೌರವ, ಪ್ರತಿಷ್ಠೆ ಹಾಗೂ ನಿನ್ನನ್ನು ರಕ್ಷಿಸುವ ತಾಯಿ ಎಂದು ತಿಳಿ' ಎಂದ ನಂತರ ಪೊಲೀಸ್ ಅಧಿಕಾರಿ ಅದೇ ಪ್ರಶ್ನೆಯನ್ನು ಮತ್ತೊಬ್ಬ ಯುವಕನಿಗೆ ಕೇಳಿದ.

ಆಗ ಆ ಯುವಕನು 'ಅದು ಕಿರಣನ ಗೌರವ, ಪ್ರತಿಷ್ಠೆ ಮತ್ತು ಅವನ ತಾಯಿ ನನಗೆ ಚಿಕ್ಕಮ್ಮನ ಸಮಾನ' ಎಂದು ಉತ್ತರಿಸಿದ.

★★★

ಆಪರೇಷನ್ ಟೇಬಲ್ ಮೇಲೆ ಮಲಗಿದ್ದ ರೋಗಿ ಡಾಕ್ಟರ್‌ಗೆ ಕೇಳಿದ: 'ಆಪರೇಷನ್ ನಂತರ ನಾನು ಎಷ್ಟು ದಿವಸ ಆಸ್ಪತ್ರೆಯಲ್ಲಿ ಉಳಿಯಬೇಕಾದೀತು.' 'ಆಪರೇಷನ್ ಯಶಸ್ವಿಯಾದರೆ ಒಂದುವಾರ, ಇಲ್ಲವಾದರೆ ಒಂದು ಗಂಟೆ' ಎಂದುತ್ತರಿಸಿದ ಆ ಉದಯೋನ್ಮುಖ ವೈದ್ಯ.

★★★

ಕನ್ಯೆಯನ್ನು ನೋಡಲು ಬಂದ ಗಂಡಿನ ಮನೆಯವರಿಗೆ ಕನ್ಯೆಯ ತಾಯಿ ಹೇಳಿದಳು: ನಮ್ಮ ಮಗಳು ಹಸುವಿದ್ದಂತೆ.

'ಹಾಗಾದರೆ ನಿಮ್ಮ ಮಗಳು ಅಷ್ಟೊಂದು ಸಂಭಾವಿತಳೇ?' ಗಂಡಿನ ತಾಯಿ.

'ಆ ಅರ್ಥದಲ್ಲಲ್ಲ ನಾನು ಹೇಳಿದ್ದು. ಹಸುವಿನಂತೆ ಅವಳು ಸದಾ ಮೆಲುಕಾಡುತ್ತಿರುತ್ತಾಳೆ.

★★★

ಒಬ್ಬ ಪೈಲ್ವಾನ್ ಸಿಟಿ ಬಸ್ಸಿನಲ್ಲಿ ಏರಿದ. ಕಂಡಕ್ಟರ್ ಟಿಕೆಟ್ ತೆಗೆದುಕೊಳ್ಳಿ ಎಂದಾಗ 'ನಾನು ಟಿಕೆಟ್ ತೆಗೆದುಕೊಳ್ಳುವುದಿಲ್ಲ' ಎಂದ ಪೈಲ್ವಾನ್. ಅವನ ಮೈಕಟ್ಟನ್ನು ನೋಡಿ ಹೆದರಿದ ಕಂಡಕ್ಟರ್ ಸುಮ್ಮನಾದ. ಮರುದಿನ ಪುನಃ ಪೈಲ್ವಾನ್ ಅದೇ ಬಸ್ಸನ್ನೇರಿದ. ಕಂಡಕ್ಟರ್ 'ಟಿಕೆಟ್ ತೆಗೆದುಕೊಳ್ಳಿ' ಎಂದ.

'ನಾನು ಟಿಕೆಟ್ ತೆಗೆದುಕೊಳ್ಳುವುದಿಲ್ಲ' ಎಂದ ಪೈಲ್ವಾನ್.

ಕಂಡಕ್ಟರ್ ಮತ್ತೆ ಹೆದರಿ ಸುಮ್ಮನಾದ.

ಈ ಕ್ರಮ ಹೀಗೆ ಹಲವು ದಿವಸಗಳವರೆಗೆ ಮುಂದುವರೆಯಿತು. ಕಂಡಕ್ಟರನಿಗೆ ಪೈಲ್ವಾನನ ಮೇಲೆ ಕೋಪ ಉಕ್ಕತೊಡಗಿತು. ಆದರೆ ಏನೂ ಮಾಡುವಂತಿರಲಿಲ್ಲ.

ನಾನು ಪೈಲ್ವಾನನನ್ನು ಎದುರಿಸಬೇಕಾದರೆ ಅವನಂತೆ ಆಗಬೇಕು ಎಂದು ಕಂಡಕ್ಟರ್ ನಿರ್ಧರಿಸಿದ. ದಿನಾ ಜಿಮ್ಮಿಗೆ ಹೋಗಿ ಕಸರತ್ತು ಮಾಡಿ ಆರು ತಿಂಗಳಲ್ಲಿ ಪೈಲ್ವಾನನಂತಾದ.

ಮತ್ತೆ ಪೈಲ್ವಾನ್ ಅದೇ ಬಸ್ಸಿಗೆ ಏರಿದ. ಎಂದಿನಂತೆ 'ಟಿಕೆಟ್ ತೆಗೆದುಕೊಳ್ಳಿ' ಎಂದ ಕಂಡಕ್ಟರ್.

'ನಾನು ತೆಗೆದುಕೊಳ್ಳುವುದಿಲ್ಲ' ಎಂದ ಪೈಲ್ವಾನ್.

'ಏಕೆ ತೆಗೆದುಕೊಳ್ಳುವುದಿಲ್ಲ?' ಎಂದು ಎದೆಯುಬ್ಬಿಸಿ ಕೇಳಿದ ಕಂಡಕ್ಟರ್.

'ಏಕೆಂದರೆ ನನ್ನ ಬಳಿ ಪಾಸಿದೆ' ಎಂದ ಪೈಲ್ವಾನ್.

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**



ಮಗ: ಇವತ್ತೂ ಉಪ್ಪಿಟ್ಟಾ?

ಅಮ್ಮ: ಈ ಧಿಮಾಕೆಲ್ಲ ಮದ್ವೆ ಮಾಡಿಕೊಂಡ ಮೇಲೆ ಹೆಂಡತಿ ಮುಂದೆ ಇಟ್ಕೋ.

ಮಗ: ಆಯ್ತಮ್ಮ!

ಗಂಡ: ಏನೇ... ಇವತ್ತೂ ಉಪ್ಪಿಟ್ಟಾ?

ಹೆಂಡತಿ: ಈ ಧಿಮಾಕು ಮಾತೆಲ್ಲ ನಿಮ್ಮ ಅಮ್ಮನ ಮುಂದೆ ಇಟ್ಕೊಳ್ಳಿ.

ಗಂಡ: ಸರಿ ಕಣೆ!

★★★

ಗಂಡ: ತರಕಾರಿಗೆ ಅಂತ ಸಾವಿರ ರೂಪಾಯಿ ತಗೊಂಡೆಲ್ಲ ಏನಾಯ್ತು?

ಹೆಂಡತಿ: ಅಯ್ಯೋ! ನಿಮ್ಮಮ್ಮ ಹೇಳಿದಾರೆ ಸಂಸಾರ ಅಂದ್ಮೇಲೆ ಸಾವಿರ ಬರುತ್ತೆ ಸಾವಿರ ಹೋಗುತ್ತೆ. ಅದೆಲ್ಲ ಲೆಕ್ಕ ಇಡಬಾರದು ಅಂತ.

★★★

ಹೆಂಡತಿ: ಯಾಕೋ ಅರ್ಧ ತಲೆ ನೋಯ್ತಾ ಇದೆ ಕಣ್ರೀ.

ಗಂಡ: ಇರೋವಷ್ಟೇ ಕಣೆ ನೋಯೋದು!

**(ಸಂಗ್ರಹ) ಹನುಮಂತ ಭಟ್ ಬಿ. ಬೆಂಗಳೂರು**